**<u>ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ನಂಜನಗೂಡು</u>.**

**<u>ಸಿ.ಸಿ. ಸಂಖ್ಯೆ. 1146/2021</u>**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ,
ನಂಜನಗೂಡು.

- ವಿರುದ್ಧ -

**ಆರೋಪಿಗಳುಃ**

1) ಶ್ರೀ.ಸಿದ್ದಶೆಟ್ಟಿ ಬಿನ್ ಲೇಟ್ ರಾಚಶೆಟ್ಟಿ
ವಯಸ್ಸು ಸುಮಾರು 70 ವರ್ಷ,
ವಾಸಃ ಸಂಖ್ಯೆ25/ಎ, ಬಿ.ಎಂ. ಬಡಾವಣೆ,
ಪ್ರಗತಿ ನಗರ. ನಂಜನಗೂಡು, ಮೈಸೂರು ಜಿಲ್ಲೆ.

2) ಶ್ರೀ.ಬಸವರಾಜು ಬಿನ್ ಲೇಟ್ ರಾಚಶೆಟ್ಟಿ
ವಯಸ್ಸು ಸುಮಾರು 55 ವರ್ಷ,
ವಾಸಃ ಕರಳಾಪುರ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

3) ಶ್ರೀ.ಮಹದೇವಶೆಟ್ಟಿ ಬಿನ್ ಲೇಟ್ ರಾಚಶೆಟ್ಟಿ
ವಯಸ್ಸು ಸುಮಾರು 63 ವರ್ಷ,
ವಾಸಃ ಕರಳಾಪುರ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

4) ಶ್ರೀ.ರಾಚಯ್ಯ ಬಿನ್ ಲೇಟ್ ರಾಚಶೆಟ್ಟಿ
ವಯಸ್ಸು ಸುಮಾರು 49 ವರ್ಷ,
ವಾಸಃ ಕರಳಾಪುರ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

5) ಶ್ರೀ.ತೊಂಡವಾಡಿ ಸಿದ್ದಶೆಟ್ಟಿ ಬಿನ್ ಲೇಟ್ ಮರಿಶೆಟ್ಟಿ
ವಯಸ್ಸು ಸುಮಾರು 70 ವರ್ಷ,
ವಾಸಃ ಕರಳಾಪುರ ಗ್ರಾಮ,

ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ-1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ?

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-2.** ಪ್ರಾಸಾ-1 ಶ್ರೀಮತಿ.ವಸಂತಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.01.2020 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಕರಳಪುರ ಗ್ರಾಮದಲ್ಲಿರುವ ಸರ್ವೆ ನಂ. 88 ರಲ್ಲಿರುವ 4 ಎಕರೆ 9 ಗುಂಟೆ ಗದ್ದೆಯಲ್ಲಿ ಬೆಳೆದಿದ್ದ ಭತ್ತ ಕಟಾವು ಮಾಡುವ ಯಂತ್ರದ ಮೂಲಕ ಭತ್ತ ಕಟಾವು ಮಾಡಿಸುತ್ತಿದ್ದ ಸಮಯದಲ್ಲಿ ಆರೋಪಿಗಳು ಸ್ಥಳಕ್ಕೆ ಬಂದಿದ್ದು, 1 ನೇ ಆರೋಪಿ ತನ್ನನ್ನು ತಬ್ಬಿ ಹಿಡಿದುಕೊಂಡು ಬೋಳಿಮುಂಡೆ, ಸೂಳೆಮುಂಡೆ ಎಂದು ಬೈದು, ತನ್ನ ರವಿಕೆಯನ್ನು ಹಿಡಿದು ಎಳೆದಾಡಿ ಕಾಲಿನಿಂದ ತನಗೆ ಒದ್ದಿರುತ್ತಾರೆ. 2 ನೇ ಆರೋಪಿಯು ಕೂಡ ತನ್ನ ಬೆನ್ನಿಗೆ ಒದ್ದಿರುತ್ತಾರೆ. ಗಲಾಟೆ ಬಿಡಿಸಲು ಬಂದ ಚಾಸಾ-2 ತನ್ನ ಮಗನನ್ನು ಉದ್ದೇಶಿಸಿ, 1 ನೇ ಆರೋಪಿ ಇವನನ್ನು ಮುಗಿಸಿಬಿಡಿ, ಎಲ್ಲಿಯತನಕ ಹೋಗುತ್ತದೆಯೋ ನೋಡಿಕೊಳ್ಳುತ್ತೇನೆ ಎಂದು ಕೈಯಿಂದ ತನ್ನ ಮಗನ ಮೈ-ಕೈಗೆ ಹೊಡೆದು ಕಾಲಿನಿಂದ ಒದ್ದಿರುತ್ತಾರೆ. ಆ ಸಂದರ್ಭದಲ್ಲಿ ಕಟಾವು ಮಾಡಿದ ಭತ್ತವನ್ನು ಟ್ರ್ಯಾಕ್ಟರ್ ಗೆ ತುಂಬುತ್ತಿದ್ದ ಚಾಸಾ-3 ಮತ್ತು 4 ಸ್ಥಳಕ್ಕೆ ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ತಾನು ಮತ್ತು ತನ್ನ ಮಗ ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-3.** ಪ್ರಾಸಾ-1 ಶ್ರೀಮತಿ.ವಸಂತಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 07.01.2020 ರಂದು ಪೊಲೀಸ್ ಠಾಣೆಗೆ ನಿಶಾನೆ ಪಿ-1 ರಂತೆ ದೂರು ನೀಡಿರುತ್ತೇನೆ. ತಾನು ಭಾಗಾಂಶ ಕೋರಿ ದಾವೆ ಸಲ್ಲಿಸಿರುತ್ತೇನೆಂಬ ಕಾರಣಕ್ಕೆ ಆರೋಪಿಗಳು ತನ್ನ ಮೇಲೆ ಗಲಾಟೆ ಮಾಡಿರುತ್ತಾರೆ. ತಾನು ದೂರು ಕೊಟ್ಟ ಮರುದಿವಸ ಪೊಲೀಸರು ಸರ್ವೆ ನಂ. 88 ರ ಜಮೀನಿಗೆ ಬಂದು ನಿಶಾನೆ ಪಿ-

2 ರಂತೆ ಮಹಜರ್ ಮಾಡಿರುತ್ತಾರೆ. ಸ್ಥಳವನ್ನು ತಾನೇ ತೋರಿಸಿರುತ್ತೇನೆ. ಆ ಸಂದರ್ಭದಲ್ಲಿ ಚಾಸಾ-3 ಮತ್ತು 4 ಇದ್ದರು. ಮಹಜರ್ ಸಮಯದಲ್ಲಿ ಮುದ್ದೆ ಮಾಲು-1 ಹರಿದು ಹೋದ ರವಿಕೆ ವಶಪಡಿಸಿಕೊಂಡಿರುತ್ತಾರೆ. ತಾನು ನ್ಯಾಯಾಲಯದಲ್ಲಿ ನಿಶಾನೆ ಪಿ-3 ರಂತೆ ಹೇಳಿಕೆ ನೀಡಿರುತ್ತೇನೆ. ತಾನು ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-4.** ಡಾಃ ಕಿರಣ್ ಕುಮಾರ್ ಸಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.01.2020 ರಂದು ತಾನು ಆಸ್ಪತ್ರೆಯಲ್ಲಿರುವಾಗ ಹಲ್ಲೆಯ ಹಿನ್ನೆಲೆಯಲ್ಲಿ ಚಾಸಾ-1 ರವರು ಹರೀಶ್ ಕುಮಾರ್ ರವರ ಜೊತೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷೆ ಮಾಡಿ ನೋಡಲಾಗಿ, ಹಣೆಯ ಎಡಭಾಗದಲ್ಲಿ ತರಚಿದ ಗಾಯ ಗಳಿದ್ದವು. (scratch marks over left forehead). ಕೈಯಿಂದ ಹಲ್ಲೆ ಮಾಡಿದಾಗ ಅಥವಾ ಕಾಲಿನಿಂದ ತುಳಿದಾಗ ಸದರಿ ಗಾಯವಾಗುವ ಸಾಧ್ಯತೆಗಳಿರುತ್ತವೆ. ಈ ಮೇಲ್ಕಂಡ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಈ ಬಗ್ಗೆ ನಾನು ನಿಶಾನೆ ಪಿ-4 ರಂತೆ ಗಾಯದ ಪ್ರಮಾಣಪತ್ರ ನೀಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-5.** ಫ್ರಾಸಾ-3 ಶ್ರೀ.ಹರೀಶ್ ಕುಮಾರ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.01.2020 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಸರ್ವೆ ನಂ.88 ರಲ್ಲಿರುವ 4 ಎಕರೆ 9 ಗುಂಟೆ ಜಮೀನಿನಲ್ಲಿ ಬೆಳೆದಿದ್ದ ಭತ್ತ ಕಟಾವು ಮಾಡಿಸಲು ಹೋಗಿದ್ದಾಗ ಆರೋಪಿಗಳು ಬಂದು ಅವರು 1 ಎಕರೆ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದು, ಹೇಗೆ ಕಟಾವು ಮಾಡಿಸುತ್ತೀಯಾ ಎಂದು ತನ್ನ ತಾಯಿಗೆ ಬೋಳಿಮಗ, ಸೂಳೆಮಗ ಎಂದು ಬೈದು ಹೊಡೆದಿರುತ್ತಾರೆ. 1 ನೇ ಆರೋಪಿ ತನ್ನ ತಾಯಿಯನ್ನು ಹಿಡಿದು ಎಳೆದಾಡಿ ತನ್ನ ತಾಯಿಯ ಜಾಕೇಟನ್ನು ಎಳೆದಿರುತ್ತಾರೆ. ಇದರಿಂದ ತನ್ನ ತಾಯಿಗೆ ಅವಮಾನವಾಗಿರುತ್ತದೆ. ಆರೋಪಿಗಳು ತನ್ನ ಮೈ-ಕೈಗೆ ಕೈಯಿಂದ ಹೊಡೆದಿರುತ್ತಾರೆ. ಆರೋಪಿಗಳು ತನ್ನ ತಾಯಿಯನ್ನು ಕೊಲೆ ಮಾಡುತ್ತೇವೆಂದು ಹೇಳಿರುತ್ತಾರೆ. ಚಾಸಾ-3 ಮತ್ತು 4 ಗಲಾಟೆ ಬಿಡಿಸಿರುತ್ತಾರೆ. ನಂತರ ತನ್ನ

ತಾಯಿಯನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ. ನಂತರ ತನ್ನ ತಾಯಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-6.** ಫ್ರಾಸಾ-4 ಶ್ರೀ.ನಂಜಶೆಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.01.2020 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಚಾಸಾ-1 ರವರು ಭತ್ತ ಕಟಾವು ಮಾಡಿಸುವಾಗ ಆರೋಪಿಗಳು ತಮ್ಮ ಜಮೀನಿನಲ್ಲಿ ಏಕೆ ಭತ್ತ ಕಟಾವು ಮಾಡಿಸುತ್ತಿದ್ದೀರಾ ಎಂದು ಚಾಸಾ-1 ರವರ ಜೊತೆ ಗಲಾಟೆ ಮಾಡಿರುತ್ತಾರೆ. ಆರೋಪಿಗಳು ಚಾಸಾ-1 ರವರನ್ನು ಉದ್ದೇಶಿಸಿ, ಸೂಳೆ ಮುಂಡೆ, ಬೋಳಿಮಕ್ಕಳೆ ಎಂದು ಬೈದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-7.** ಫ್ರಾಸಾ-5 ಶ್ರೀ.ಮಹದೇವಶೆಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 5 ವರ್ಷಗಳ ಹಿಂದೆ (ಸಾಕ್ಷ್ಯ ನುಡಿದ ದಿನಾಂಕ 02.12.2025) ರಾತ್ರಿ 8.00 ಗಂಟೆ ಸಮಯದಲ್ಲಿ ಚಾಸಾ-1 ರವರ ಜಮೀನಿನಲ್ಲಿ ಭತ್ತ ಕಟಾವು ಮಾಡಿಸುವಾಗ 1 ನೇ ಆರೋಪಿ ಬಂದು ತನ್ನ ಜಮೀನಿನಲ್ಲಿ ಏಕೆ ಕಟಾವು ಮಾಡಿಸುತ್ತಿದ್ದೀರಿ ಎಂದು ಕೇಳಿದಾಗ ಚಾಸಾ-1 ತನ್ನ ಜಮೀನು ಎಂದು ಹೇಳಿರುತ್ತಾರೆ. ಆಗ 1 ನೇ ಆರೋಪಿ ಮತ್ತು ಚಾಸಾ-1 ರವರ ನಡುವೆ ಗಲಾಟೆಯಾಗಿ 1 ನೇ ಆರೋಪಿ ಚಾಸಾ-1 ರವರಿಗೆ ಕೈಯಿಂದ ಅವರ ಮೈ ಕೈಗೆ ಹೊಡೆದು ಕಾಲಿನಿಂದ ಒದ್ದು, ಅವರ ರವಿಕೆಯನ್ನು ಕಿತ್ತುಹಾಕಿರುತ್ತಾರೆ. 2 ರಿಂದ 5 ನೇ ಆರೋಪಿಗಳು ಬಂದು ಯಾವುದೇ ರೀತಿ ಗಲಾಟೆ ಮಾಡಬೇಡಿ ಎಂದು ಸಮಾಧಾನ ಮಾಡಿರುತ್ತಾರೆ. 1 ನೇ ಆರೋಪಿ ಚಾಸಾ-2 ರವರ ಜೊತೆಯೂ ಗಲಾಟೆ ಮಾಡಿ ಹೊಡೆಯಲು ಹೋದಾಗ ನೀವು ಒಂದೇ ಕುಟುಂಬದವರು ಈ ರೀತಿ ಮಾಡಬೇಡಿ ಎಂದು ತಾನು ಮತ್ತು ಚಾಸಾ-3 ಸಮಾಧಾನ ಮಾಡಿರುತ್ತೇವೆ. ನಂತರ ಚಾಸಾ-2 ರವರು ತನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರು ದೂರು ಕೊಟ್ಟ ನಂತರ ಪೊಲೀಸರು ಜಮೀನಿನ ಬಳಿ ಬಂದು ಸಂಜೆ 4.00-4.45 ಗಂಟೆಯವರೆಗೆ ನಿಶಾನೆ ಪಿ-2 ರಂತೆ ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ತಾನು

ಮತ್ತು ಚಾಸಾ–3 ಇದ್ದೆವು. ತಾನು ಹೆಬ್ಬೆಟ್ಟು ಗುರುತು ಹಾಕಿರುತ್ತೇನೆ. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ–8.** ಫ್ರಾಸಾ–5 ಶ್ರೀ.ಮಹದೇವಶೆಟ್ಟಿ ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆರೋಪಿಗಳು ಅಕ್ರಮ ಗುಂಪು ಸೇರಿ ಚಾಸಾ–1 ರವರನ್ನು ಉದ್ದೇಶಿಸಿ ಬೋಳಿಮಗಳೆ, ಸೂಳೆಮಗಳೆ ಎಂದು 1 ನೇ ಆರೋಪಿ ಬೈದಿರುತ್ತಾರೆ. 1 ನೇ ಆರೋಪಿ ಚಾಸಾ–1 ರವರನ್ನು ತಬ್ಬಿ ಹಿಡಿದುಕೊಂಡು ಕೈಯಿಂದ ಅವರ ಹಣೆಗೆ ಹೊಡೆದಿರುತ್ತಾರೆ. ಚಾಸಾ–1 ರವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಅವರ ರವಿಕೆಯನ್ನು ಹರಿದುಹಾಕಿರುತ್ತಾರೆ. 1 ನೇ ಆರೋಪಿ ಚಾಸಾ–1 ರವರನ್ನು ಏನಾದರೂ ಆಗಲಿ ಮುಗಿಸಿ ಬಿಡೋಣ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಗಲಾಟೆಯ ಬಗ್ಗೆ ಚಾಸಾ–1 ರವರನ್ನು ವಿಚಾರಿಸಿದಾಗ ಸರ್ವೆ ನಂ.88 ರ ಜಮೀನಿನ ವಿಚಾರವಾಗಿ ಗಲಾಟೆ ಮಾಡಿರುತ್ತಾರೆ ಎಂದು ತನಗೆ ತಿಳಿಸಿರುತ್ತಾರೆ. ಈ ಎಲ್ಲಾ ವಿಚಾರಗಳನ್ನು ಪೊಲೀಸರು ಕೇಳಿದಾಗ ಹೇಳಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ–9.** ಫ್ರಾಸಾ–6 ಶ್ರೀ.ನಂಜೇಗೌಡ ಎಂ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 07.01.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಫ್ರಾಸಾ–1 ರವರು ಠಾಣೆಗೆ ಹಾಜರಾಗಿ ನಿ.ಪಿ–6 ರಂತೆ ಲಿಖಿತ ದೂರು ನೀಡಿದ್ದು, ನಂತರ ನಿಶಾನೆ ಪಿ–2 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ದಿನಾಂಕ 08.01.2020 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ–1 ರವರು ತೋರಿಸಿಕೊಟ್ಟಂತೆ ಚಾಸಾ–3 ಮತ್ತು 4 ರವರ ಸಮಕ್ಷಮ ನಿಪಿ–2 ರಂತೆ ಮಹಜರ್ ಮಾಡಿ ಮುದ್ದೆ ಮಾಲು–1 ನ್ನು ವಶಪಡಿಸಿಕೊಂಡಿರುತ್ತೇನೆ. ಮಹಜರ್ ನ್ನು ಚಾಸಾ–6 ಬರೆದಿರುತ್ತಾರೆ. ಮಹಜರ್ ಸಮಯದಲ್ಲಿ ಮುದ್ದೆ ಮಾಲು–1 ಜಮೀನಿನಲ್ಲಿ ಬಿದ್ದಿತ್ತು. ತಾನು ಸಾಕ್ಷಿದಾರರಾದ ಚಾಸಾ–2 ರಿಂದ 4 ರವರ ಹೇಳಿಕೆ ಮತ್ತು ಚಾಸಾ–1 ರವರ ಮರು ಹೇಳಿಕೆ ಪಡೆದು, ಕಡತವನ್ನು

ಮುಂದಿನ ತನಿಖೆಗೆ ಚಾಸಾ-9 ರವರಿಗೆ ವಹಿಸಿಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-10.** ಪ್ರಾಸಾ-7 ಶ್ರೀ.ಸತೀಶ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 20.01.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-8 ರವರಿಂದ ಪಡೆದು ಪರಿಶೀಲಿಸಿ, ಚಾಸಾ-1 ರವರಿಗೆ ಸಂಬಂಧಪಟ್ಟ ನಿಪಿ-4 ರಂತೆ ಗಾಯದ ಪ್ರಮಾಣಪತ್ರ ಪಡೆದು ಆರೋಪಿಗಳ ವಿರುದ್ಧ ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-11.** ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

1 **ರಿಂದ** 5 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-12.** ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

1 **ರಿಂದ** 5 **ನೇ ಆರೋಪಿಗಳ ಉತ್ತರಃ**

(ಮೇಲಿನ ಹೇಳಿಕೆಗಳನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಕನ್ನಡದಲ್ಲಿ ಓದಿ ಹೇಳಿ ನಂತರ ಆರೋಪಿಗಳು ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸುತ್ತೇನೆ.)

**ದಿನಾಂಕಃ** 01.04.2026

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.**